ಬಂಡವಾಳ ಅವರ ಬಿಸಿನೆಸ್‌ನಲ್ಲಿ ಇದೆ. ಕೇರಳದಲ್ಲಿ ಈಗ ಪೊಲಿಟಿಷಿಯೆನ್ಸ್ ತಮ್ಮ ಬ್ಲಾಕ್ ಮನಿಯನ್ನು ಬಂಗಾರ ಮತ್ತು ವಜ್ರಗಳ ವ್ಯಾಪಾರಿಗಳ ಬಳಿ ಜಾಸ್ತಿ ಇಡ್ತಾ ಇದಾರಂತೆ. ಅದಿರಲಿ, ಚಂಗನ್ಚೇರಿ ಕರುಣಾಕರನ್ ಮೊದಲಿಯಾರ್ ಅಂದ್ರೆ ಇಡೀ ಕೇರಳದಲ್ಲಿ ಒಂದಿಷ್ಟೂ ಮೋಸವಿಲ್ಲದ ಚಿನ್ನದ ವ್ಯಾಪಾರಿ ಎಂದು ಹೆಸರಿದೆಯಂತೆ. ಸೇಲ್ಸ್ ಟ್ಯಾಕ್ಸ್, ಇನ್ಕಮ್ ಟ್ಯಾಕ್ಸ್ ಡಿಪಾರ್ಟ್ಮೆಂಟ್‌ನವರು ಅವರ ಸಹವಾಸಕ್ಕೆ ಹೋಗಲ್ವಂತೆ. ಅದಕ್ಕೆ ಕಾರಣ ಅವರಿಗಿರುವ ಕೆ.ಎಮ್. ನಯ್ಯಾರರ ಬಲವಾದ ಸಪೋರ್ಟ್. ಇನ್ನೊಂದು ಗುಟ್ಟು, ಕರುಣಾಕರನ್ ಮೊದಲಿಯಾರರ ತಂಗಿಗೂ ಮತ್ತು ಕೆ.ಎಮ್. ನಯ್ಯಾರ್ ಅಣ್ಣ ಸುಧೀಂದ್ರ ನಯ್ಯಾರರಿಗೂ ಬಹಳ ವರ್ಷಗಳ ಕಾಲ ಸಂಬಂಧ ಇತ್ತಂತೆ. ಕೆಲವೊಮ್ಮೆ ಈಗಲೂ ವಾರಗಟ್ಟಲೆ ಮೊದಲಿಯಾರ್ ತಂಗಿ ಸ್ಕೂಲ್ ಆಫ್ ಚಾಲೆಂಜ್ ದಿ ಚಾಲೆಂಜ್‌ನಲ್ಲಿ ವಾಲಂಟರಿಯಾಗಿ ಸೇವೆ ಸಲ್ಲಿಸುತ್ತಾಳೆ. ಕೇರಳದ ಉದ್ದಕ್ಕೂ ಸಮುದ್ರ ಇದೆಯಲ್ವಾ... ಅಲ್ಲಿನ ಜನ ಕೂಡಾ ಸಮುದ್ರದಂತೆ. ಸಮುದ್ರದ ಮೇಲ್ಭಾಗದಲ್ಲಿ ಸುಂದರವಾದ ಅಲೆಗಳು ಮಾತ್ರ ಕಾಣುತ್ತವೆ. ಆದರೆ ಸಮುದ್ರದ ಗರ್ಭದಲ್ಲಿರುವ ಭೀಕರ ಮತ್ತು ರಹಸ್ಯ ಸಂಗತಿಗಳು ಯಾರಿಗೂ ಎಳ್ಳಷ್ಟೂ ತಿಳಿಯುವುದಿಲ್ಲ'. ರಾಘವರೆಡ್ಡಿ ಬಹಳ ಚೆನ್ನಾಗಿ ಹೋಲಿಕೆ ಕೊಟ್ಟಿದ್ದ.

'ಇನ್ನೊಂದು ದೊಡ್ಡ ದುರಂತದ ವಿಷಯವೇನೆಂದರೆ ಇವೊತ್ತು ಪತ್ತನಂತಿಟ್ಟುವಿನಲ್ಲಿ ಹಠಾತ್ತನೆ ಉಂಟಾದ ಪ್ರವಾಹದಲ್ಲಿ ಕಾರ್ಮಿಕ ನಾಯಕ ನೆಲ್ಸನ್ ಮತ್ತು ಕನ್ಯಾಕುಮಾರಿಯ ಅಚ್ಯುತನ್ ನಂಬಿಯಾರ್ ಪ್ರಾಣ ಕಳೆದುಕೊಂಡಿದ್ದಾರೆ. ಇನ್ನೂ ಆಶ್ಚರ್ಯದ ಸಂಗತಿಯೆಂದರೆ ಇಬ್ಬರ ಹೆಣಗಳೂ ತೀರಾ ಅಕ್ಕಪಕ್ಕದಲ್ಲೇ ಪತ್ತೆಯಾಗಿವೆ. ಇಲ್ಲಿನ ಕೆಲವು ರಾಜಕೀಯ ನಾಯಕರು, ಸಣ್ಣಪುಟ್ಟ ಕಾರ್ಮಿಕ ಮುಖಂಡರು ನೆಲ್ಸನ್ ಪ್ರವಾಹದಿಂದಾಗಿ ಸತ್ತಿಲ್ಲ, ಬದಲಾಗಿ ಆತನನ್ನು ಕೊಲೆ ಮಾಡಿ ಪ್ರವಾಹದಲ್ಲಿ ಎಸೆಯಲಾಗಿದೆ ಎಂದು ಮಾಧ್ಯಮಗಳಲ್ಲಿ ಧ್ವನಿಯೆತ್ತಿದ್ದಾರೆ. ಆದರೆ ಪೊಲೀಸರ ಪ್ರಕಾರ ಪತ್ತನಂತಿಟ್ಟುವಿನಲ್ಲಿ ನೆಲ್ಸನ್ ವಾಸವಿದ್ದ ಮನೆ ಪ್ರವಾಹದಲ್ಲಿ ಮುಳುಗಿಹೋಗಿರುವುದರಿಂದ ಆತ ನಿಜವಾಗಿಯೂ ಪ್ರವಾಹದಿಂದಾಗಿಯೇ ಸತ್ತಿರುವುದೆಂದು.'

ನನ್ನ ಮಾತುಗಳನ್ನು ಕೇಳಿ ಹದಿನೈದಿಪ್ಪತ್ತು ಸೆಕೆಂಡುಗಳ ಕಾಲ ಮೌನವಾಗಿದ್ದ ರಾಘವರೆಡ್ಡಿ, 'ಓ ಮೈ ಗಾಡ್, ಖಂಡಿತವಾಗಿಯೂ ನನಗೆ ನಂಬಲಿಕ್ಕೆ ಆಗುತ್ತಿಲ್ಲ. ಮಧ್ಯಾಹ್ನ ಊಟ ಮಾಡಿ ಸ್ವಲ್ಪ ದೂರ ವಾಕಿಂಗ್ ಹೋಗಿದ್ದೆ. ಆಂಧ್ರ ಭವನದ ಸ್ವಲ್ಪ ದೂರದಲ್ಲಿ ಮರವೊಂದರ ಮೇಲೆ ಕೂತ ಎರಡು ಕಾಗೆಗಳು ಕಾಂವ್ ಕಾಂವ್ ಅಂತ ಜೋರಾಗಿ ಕೂಗಿಕೊಳ್ಳುತ್ತಿದ್ದವು. ನಾನೇನು ಅದನ್ನು ಮನಸ್ಸಿಗೆ ಹಾಕಿಕೊಂಡಿರಲಿಲ್ಲ. ನೀನು ಈಗ ಹೇಳಿದ ಮಾತು ಕೇಳಿ ಶಾಕ್‌ನಿಂದಾಗಿ ಕುಡಿದ ಮತ್ತಲ್ಲದೆ ಪಿಸ್ತೂಲಾದ ನೋವು ಕೂಡಾ ಮಂಗಮಾಯವಾದಂತಿದೆ. ಆ ಇಬ್ಬರೂ ಮಹಾನುಭಾವರು ಯಾವೊತ್ತೋ ಮರ್ಡರ್ ಆಗಬೇಕಾಗಿತ್ತು. ನಾವು ಏನು ಮೇಲೆ ಎಸೆಯುತ್ತೇವೆಯೋ ಅದೇ ಕೆಳಕ್ಕೆ ಬೀಳುವುದು. ಸುಧೀಂದ್ರ ನಯ್ಯಾರ್ ಇದಾರಲ್ಲ... ನೀನು ದಿಲ್ಲಿಗೆ ಬಂದ ಮೇಲೆ ಹೇಳುತ್ತೇನೆ' ಎಂದು ಯಾವುದೋ ರಹಸ್ಯವನ್ನು ಬಚ್ಚಿಡುವವನಂತೆ ಹೇಳಿದ್ದ ರಾಘವರೆಡ್ಡಿ. ರಾಘವರೆಡ್ಡಿಯ ಮನಸ್ಸನ್ನು ತಿಳಿಗೊಳಿಸಲು 'ಪೈಲ್ಸ್ ಮತ್ತು ಪಿಸ್ತೂಲಾ ಕಾಯಿಲೆಗೆ ಪೋರ್ಕ್ ರಾಮಬಾಣದಂತೆ ಕೆಲಸ ಮಾಡುತ್ತದಂತೆ, ಯಾಕೆ ತಿನ್ನೋದು ಪ್ರಾಕ್ಟೀಸ್ ಮಾಡಿಕೊಂಡಿಲ್ವ?' ಎಂದು ಮಾತು ಬದಲಿಸಿದ್ದೆ. 'ಅಯ್ಯಯ್ಯಪ್ಪ ಅದರ ಸುದ್ದಿ ಮಾತ್ರ ಹೇಳ್ಬೇಡ ಮಾರಾಯ. ನರಸಿಂಹಸ್ವಾಮಿ ನಮ್ಮ ಮನೆ ದೇವರು. ವರಾಹ ಅವತಾರ ಆ ಮಹಾನುಭಾವನದೇನಂತೆ. ಮನೆ ದೇವರನ್ನು ತಿಂದು ಅರಗಿಸಿಕೊಳ್ಳೋದುಂಟಾ? ಬಹಳ ಹಿಂದೆ ನಮ್ಮ ಮೊದಲನೇ ದೊಡ್ಡಪ್ಪನ ಮಗ ಬೇಡಬೇಡವೆಂದರೂ ತಿಂದು ಕಾರ್ ಆಕ್ಸಿಡೆಂಟ್‌ನಲ್ಲಿ ಎರಡು ಕಾಲುಗಳನ್ನೂ ಕಳೆದುಕೊಂಡು ಐದಾರು ವರ್ಷ ಅನುಭವಿಸಿದ. ಅದರ ಸಹವಾಸ ಬೇಡ. ಗುಡ್ ನೈಟ್' ಎಂದು ಫೋನ್ ಕಟ್ ಮಾಡಿದ್ದ.

ಭಾಗ–14

ಮಾರನೆಯ ದಿನ ವಾತಾವರಣ ಬಹಳ ಪ್ರಶಾಂತವಾಗಿತ್ತು. ಎಂಟು ಗಂಟೆಗೆಲ್ಲಾ ತಿಂಡಿ ತಿಂದು ರೆಡಿಯಾಗಿದ್ದೆವು. ಚಂಗನ್ಚೇರಿಯ ವಿಶಾಲವಾದ ರೈಲು ನಿಲ್ದಾಣವು ಪ್ರವಾಹದಿಂದ ಮನೆ ತೋಟ ಕಳೆದುಕೊಂಡವರಿಗೆ ನಿರಾಶ್ರಿತರ ಶಿಬಿರವಾಗಿ ರೂಪಾಂತರಗೊಂಡಿತ್ತು. ಕೆ.ಎಂ. ನಯ್ಯಾರ್ ಅಲ್ಲಿಗೆ ಮೊದಲು ಭೇಟಿ ನೀಡಿ ಅಲ್ಲಿಂದ ಎರ್ನಾಕುಲಂಗೆ ಹೋಗಲು ತೀರ್ಮಾನಿಸಿದ್ದರು. ಹೊರಡಬೇಕೆನ್ನುವಷ್ಟರಲ್ಲಿ ಹೊಸ ಇನ್ನೋವಾ ಕಾರೊಂದು ಬಂದು ನಿಂತಿತ್ತು. ಕಾರಿನ ನೇಮ್ ಪ್ಲೇಟಿನಲ್ಲಿ ಪಿಡಬ್ಲ್ಯುಡಿ ಮಿನಿಸ್ಟರ್ ಎಂದು ಬರೆದಿತ್ತು. ಮೊನ್ನೆ ರಾತ್ರಿ ಮಿನಿಸ್ಟರ್ ದೆಹಲಿಯಿಂದ ಫೋನಿನಲ್ಲಿ ಮಾತನಾಡಿದಾಗ ಲೌಡ್ ಸ್ಪೀಕರ್ ಆನ್ ಮಾಡಿ ಅವರ ಮಾತುಗಳನ್ನು ನಯ್ಯಾರ್ ನನಗೆ ಕೇಳಿಸಿದ್ದರ ನೆನಪಾಯಿತು. ಮಿನಿಸ್ಟರ್ ಕಾರಿನಿಂದ ಇಳಿದು ಅಲ್ಲೇ ಮಾತನಾಡಿಕೊಂಡು ನಿಂತಿದ್ದ ಕೆ.ಎಮ್. ನಯ್ಯಾರ್ ಕಾಲಿಗೆ ಮೊದಲು ನಮಸ್ಕರಿಸಿ ನಂತರ ಕರುಣಾಕರನ್ ಮೊದಲಿಯಾರ್ ಕಾಲಿಗೆ ನಮಸ್ಕರಿಸಿದ್ದರು.

ಮಿನಿಸ್ಟರ್ ಸತೀಶ್ ಹರಿಹರನ್ ನಲವತ್ತೈದು ಐವತ್ತು ವರ್ಷಗಳ ಯುವಕನಂತೆ ಕಾಣುತ್ತಿದ್ದರು. ಶುಂಠಿ ಕಷಾಯವನ್ನು ಕುಡಿದು ಅಲ್ಲಿಂದ ಮಿನಿಸ್ಟರ್ ಜೊತೆಯಲ್ಲಿ ಅವರ ಕಾರಿನಲ್ಲೇ ಕೆ.ಎಮ್. ನಯ್ಯಾರ್ ಮತ್ತು ನಾನು ಚಂಗನ್ಚೇರಿಯ ರೈಲು ನಿಲ್ದಾಣಕ್ಕೆ ತೆರಳಿದ್ದೆವು. ಕರುಣಾಕರನ್ ಮೊದಲಿಯಾರ್ ತಮ್ಮ ಜ್ಯುವೆಲರಿ ಅಂಗಡಿಗೆ ತೆರಳಿದ್ದರು. ಭಗವಾನ್ ಕುಟ್ಟಿ, ಮನೋಹರ್ ಕುಂಜು ನಯ್ಯಾರ್ ಕಾರಿನಲ್ಲಿ ನಮ್ಮನ್ನು ಹಿಂಬಾಲಿಸಿದ್ದರು. ಚಂಗನ್ಚೇರಿಯ ರೈಲು ನಿಲ್ದಾಣದ ಪ್ಲಾಟ್ ಫಾರಂ ಜನಜಂಗುಳಿಯಿಂದ ಪಿತಗುಡುತ್ತಿತ್ತು. ಜನ ಬಹಳ ಶಿಸ್ತು ಸಂಯಮದಿಂದ ಇದ್ದರು. ಸತೀಶನ್ ಹರಿಹರನ್ ಜನರನ್ನುದ್ದೇಶಿಸಿ ಮಾತನಾಡಿದ್ದರು. ಕೇಂದ್ರ ಸರ್ಕಾರದಿಂದ ಅಗತ್ಯ ನೆರವನ್ನು ತರಿಸಿ ಕಷ್ಟಕ್ಕೆ ಸಿಲುಕಿರುವ ಜನರ ಬದುಕನ್ನು ಹಸನುಗೊಳಿಸಲು ತೀವ್ರ ಪ್ರಯತ್ನ ಪಡುತ್ತಿರುವುದಾಗಿ, ಈ ನಿಟ್ಟಿನಲ್ಲಿ ಹಿರಿಯರಾದ ಕೆ.ಎಮ್. ನಯ್ಯಾರ್ , ಸುಧೀಂದ್ರ ನಯ್ಯಾರ್ , ಕರುಣಾಕರನ್ ಮೊದಲಿಯಾರ್ ಇನ್ನೂ ಅನೇಕ ಮಂದಿ ಹಿತೈಷಿಗಳು ತನ್ನ ಹಿಂದಿರುವುದಾಗಿಯೂ ಯಾವುದೇ ಕಾರಣಕ್ಕೂ ಎದೆಗುಂದಬಾರದೆಂದು ಕೈ ಮುಗಿಯುತ್ತ ಜನರನ್ನುದ್ದೇಶಿಸಿ ಹೇಳಿದ್ದರಲ್ಲದೆ ಅಲ್ಲಿದ್ದ ಪ್ರತಿಯೊಬ್ಬ ವ್ಯಕ್ತಿಗೂ ತಲಾ ಐನೂರು ರೂಪಾಯಿಗಳನ್ನು ಹಂಚಿದ್ದರು. ಕೆ.ಎಮ್. ನಯ್ಯಾರ್ ಕೂಡಾ ಜನರ ಜೊತೆ ತಾವಿರುವುದಾಗಿ ಭರವಸೆಯ ಮಾತುಗಳನ್ನಾಡುತ್ತಿದ್ದರು. 'ನಮ್ಮ ಕೇರಳದ ಜನರಲ್ಲಿ ಶಿಸ್ತು ಮತ್ತು ಸಂಯಮ ಅಪಾರವಾಗಿರುವುದರಿಂದಲೇ ದೇಶದ ಎಲ್ಲಾ ರಾಜ್ಯಗಳಲ್ಲೂ ನಮ್ಮವರು ಬದುಕುವುದನ್ನು ಕಲಿತಿದ್ದಾರೆ. ಮತ್ತು ಎಂಥಾ ಕಷ್ಟಗಳು ಬಂದರೂ ಧೈರ್ಯದಿಂದ ಎದುರಿಸುವ ಛಾತಿಯುಳ್ಳವರಾಗಿದ್ದಾರೆ' ಎಂದು ಭಗವಾನ್ ಕುಟ್ಟಿ ನನ್ನ ಕಿವಿಯಲ್ಲಿ ಉಸುರಿದ್ದ.

ಮಿನಿಸ್ಟರ್ ಸತೀಶನ್ ಹರಿಹರನ್ ಚಂಗನ್ಚೇರಿಯಲ್ಲಿಯೇ ಉಳಿದುಕೊಂಡಿದ್ದರು. ನಾವು ಎರ್ನಾಕುಲಂ ಕಡೆ ಪ್ರಯಾಣ ಬೆಳೆಸಿದ್ದೆವು. ಪ್ರವಾಹ ನಿಂತು ಪರಿಹಾರ ಕಾರ್ಯಗಳನ್ನು ಕೈಗೊಳ್ಳುತ್ತಿದ್ದರೂ ಸಾಕ್ರಾಮಿಕ ರೋಗಗಳ ಭೀತಿ ಪ್ರವಾಹಪೀಡಿತ ಪ್ರದೇಶಗಳನ್ನು ಬಹಳವಾಗಿ ಆವರಿಸಿಕೊಂಡಿತ್ತು. ಪತ್ರಿಕೆಗಳಲ್ಲಿ ನೆಲ್ಸನ್ ಮತ್ತು ಅಚ್ಯುತನ್ ನಂಬಿಯಾರ್ ಸಾವಿನ ಬಗ್ಗೆ ಬಗೆ ಬಗೆಯ ಸುದ್ದಿಗಳು ಪ್ರಕಟವಾಗಿದ್ದವು. ಕೆ.ಎಮ್. ನಯ್ಯಾರ್ ಸುಮಾರು ಪತ್ರಿಕೆಗಳನ್ನು ತಿರುವಿ ಹಾಕುತ್ತಿದ್ದರು. ವಿಮಾನ ಯಾನ ಕಂಪನಿಯಿಂದ ನನಗೆ ಫೋನ್ ಬಂದಿತ್ತು. ಟ್ರೂಕಾಲರ್‌ನಿಂದಾಗಿ ಗೊತ್ತಾಗಿತ್ತು. 'ಹಲೋ' ಎಂದಿದ್ದೆ. 'ಹಲೋ ಕ್ರಾಂತಿ ಕಿರಣ್ ರೆಡ್ಡಿಯವರ?' ಮಧುರವಾದ ಹೆಣ್ಣಿನ ಧ್ವನಿಯ ಪ್ರಶ್ನೆ. 'ಹೌದು' ಎಂದಿದ್ದೆ. 'ವಿಮಾನ ಹಾರಾಟ ಮಧ್ಯರಾತ್ರಿಯಿಂದಲೇ ಶುರುವಾಗಿದೆ ಸಾರ್. ನಿಮ್ಮ ದೆಹಲಿ ಪ್ರಯಾಣಕ್ಕೆ ಇವೊತ್ತು ಮಧ್ಯಾಹ್ನ ಮೂರೂವರೆ ಗಂಟೆಗೊಂದು ವಿಮಾನ ಇದೆ. ತಪ್ಪಿದರೆ ನಾಳೆ ಮುಂಜಾನೆ ನಾಲ್ಕು ಗಂಟೆಗೊಂದು ವಿಮಾನ ಇದೆ. ನೀವು ಯಾವ ವಿಮಾನದಲ್ಲಿ ಪ್ರಯಾಣಿಸುತ್ತೀರೆಂದು ತಕ್ಷಣ ಹೇಳಿದರೆ ಕನ್ಫರ್ಮ್ ಮಾಡ್ತೀವಿ. ನಿಮಗೆ ಬೆಳಿಗ್ಗೆಯೇ ಮೆಸೇಜ್ ಕಳಿಸಿದ್ದೀವಿ. ರಿಪ್ಲೈ ಬರದ ಕಾರಣ ಕಾಲ್ ಮಾಡ್ತಾ ಇದೀವಿ'. ಆಕೆಯ ಧ್ವನಿಯಲ್ಲಿ ನಾನು ಮೆಸೇಜ್ ನೋಡಿಲ್ಲವೆಂಬುದರ ಒಂದಿಷ್ಟು ಬೇಸರ ಕೂಡಾ ಇರಲಿಲ್ಲ. 'ಸಾರಿ ಮೇಡಮ್, ನಾನು ಮೆಸೇಜ್ ನೋಡಿರಲಿಲ್ಲ. ಮಧ್ಯಾಹ್ನದ ಮೂರೂವರೆಯ ಫ್ಲೈಟ್ ಕ್ಯಾಚ್ ಮಾಡಲು ಸಾಧ್ಯವಾಗುವುದಿಲ್ಲ. ನಾಳೆ ಮುಂಜಾನೆಯ ನಾಲ್ಕು ಗಂಟೆಯ ಫ್ಲೈಟ್ ಕನ್ಫರ್ಮ್ ಮಾಡಿ' ಎಂದಿದ್ದೆ. 'ಥ್ಯಾಂಕ್ಯೂ' ಎಂದಿತ್ತು ಆ ಕಡೆಯಿಂದ ಮಧುರವಾದ ಧ್ವನಿ.

'ನಾಳೆ ಮುಂಜಾನೆ ಭಗವಾನ್ ಕುಟ್ಟಿ ನಿಮ್ಮನ್ನು ಏರ್‌ಪೋರ್ಟ್‌ಗೆ ಡ್ರಾಪ್ ಮಾಡಿ ಬರ್ತಾನೆ. ನಾನು